# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

**ಎಸ್.ಸಿ. ಸಂಖ್ಯೆ 121/2019**

| | | |
|---|---|---|
| ಸಾಕ್ಷಿದಾರರ ಹೆಸರು | : ಬಾಬು | ಪಿಡಬ್ಲ್ಯೂ : 10 |
| ತಂದೆಯ / ಗಂಡನ ಹೆಸರು | : ಎಂ ಪಿ ಬಸವರಾಜಕುಮಾರ್ ಅಲಿಯಾಸ್ ಶಿವಣ್ಣ | ಸಿಡಬ್ಲ್ಯೂ : 8 |
| ವಯಸ್ಸು | : 50 ವರ್ಷ | |
| ಉದ್ಯೋಗ | : ಗಾರೆ ಕೆಲಸ | |
| ವಾಸಸ್ಥಳ | : ಬನ್ನಿಮಂಟಪ , ಮೈಸೂರು | |

**ಸಾಕ್ಷಿಯನ್ನು ಈ ದಿನ ದಿಃ12.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ನಾನು ಮೇಲೆ ಹೇಳಿದ ವಿಳಾಸದಲ್ಲಿ ಹಲವು ವರ್ಷಗಳಿಂದ ವಾಸವಿರುತ್ತೇನೆ.

2. ಈ ಕೇಸಿನ ಗಾಯಾಳುವಾದ ನಾರಾಯಣ ರವರ ಪರಿಚಯ ಇರುತ್ತದೆ. 1 ನೇ ಆರೋಪಿ ಹರೀಶನ ಪರಿಚಯ ಇರುತ್ತದೆ. ಚಾಸಾ.6 ಮತ್ತು 7 ರವರ ಪರಿಚಯ ಇರುತ್ತದೆ. ಈಗ 7 ವರ್ಷ 2 ತಿಂಗಳ ಹಿಂದೆ ಮೇಟಗಳ್ಳಿ ಪೊಲೀಸ್ ಠಾಣೆಯವರು ನನ್ನನ್ನು ಪೊಲೀಸ್ ಠಾಣೆ ಗೆ ಕರೆಸಿದ್ದರು. ನನ್ನ ಜೊತೆ ದಿನೇಶ , ಮಲ್ಲೇಶ್ ರವರು ಕೂಡ ಬಂದಿದ್ದರು. ನಾನು ಠಾಣೆಗೆ ಹೋದಾಗ ಅಲ್ಲಿ 1 ನೇ ಆರೋಪಿ ಇದ್ದರು. ಠಾಣೆಯಲ್ಲಿ ನನ್ನ ಮತ್ತು ಚಾಸಾ.6 ಮತ್ತು 7, 1 ನೇ ಆರೋಪಿಯವರ ಪೋಟೋಗಳನ್ನು ತೆಗೆದು, ಸಹಿ ಪಡೆದುಕೊಂಡು , ನಂತರ ನಮ್ಮನ್ನು ಉಮ್ಮತಿನಗರಕ್ಕೆ ಕರೆದುಕೊಂಡು ಹೋದರು .

3. ಉಮ್ಮತಿನಗರಕ್ಕೆ 1 ನೇ ಆರೋಪಿ ಕರೆದುಕೊಂಡು ಹೋಗಿ, ಅಲ್ಲಿ ಒಂದು ಚರ್ಚ್ ಇದ್ದು, ಚರ್ಚ್ ನ ಬಳಿ ಪೊದೆಯಿಂದ ಒಂದು ಲಾಂಗ್ ನ್ನು ತೆಗೆದು ನಮಗೆ ತೋರಿಸಿ , ಹಾಜರುಪಡಿಸಿರುತ್ತಾನೆ. ಸದರಿ ಲಾಂಗ್ ನ್ನು ಒಂದು ಬಿಳಿ ಬಣ್ಣದ ಬ್ಯಾಗ್ ನಲ್ಲಿ ಹಾಕಿ, ಅದಕ್ಕೆ ಸೀಲ್ ಮಾಡಲಾಯಿತು. ಅಲ್ಲದೇ ಪೊದೆಯಿಂದ ಒಂದು ಬಿಳಿ ಬಟ್ಟೆಯನ್ನು 1 ನೇ ಆರೋಪಿ ಹಾಜರುಪಡಿಸಿದನು. ಸದರಿ ಬಟ್ಟೆಯನ್ನು ನಾನೇ ಬಿಳಿ ಬಟ್ಟೆಯಲ್ಲಿ ಹಾಕಿರುತ್ತೇನೆ. ನಂತರ ಅದನ್ನು ಸೀಲ್ ಮಾಡಲಾಯಿತು. ಸದರಿ ಸ್ಥಳದಲ್ಲಿ ಪೋಟೋಗಳನ್ನು ತೆಗೆಯಲಾಯಿತು. ಸದರಿ ಸ್ಥಳದಲ್ಲಿ ಪೊಲೀಸರು ಬರವಣಿಗೆ ಮಾಡಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ.

4. ನಂತರ ನಮ್ಮನ್ನು ಚಾಸಾ.2 ನಾರಾಯಣರವರ ಕಚೇರಿಯ ಬಳಿ ಕರೆದುಕೊಂಡು ಹೋದರು. ಸದರಿ ಸ್ಥಳದಲ್ಲಿ ಗಲಾಟೆಯಾಗಿ, ಹಲ್ಲೆಯಾಗಿರುತ್ತದೆ ಎಂದು 1 ನೇ ಆರೋಪಿ ತೋರಿಸಿದ್ದು , ಆ ಕಾರಣಕ್ಕೆ ಅಲ್ಲಿಗೆ ಕರೆದಕೊಂಡು ಹೋಗಿರುತ್ತಾರೆ. ಸದರಿ ಸ್ಥಳವನ್ನು 1 ನೇ ಆರೋಪಿ ಹಲ್ಲೆ ಮಾಡಿದ ಸ್ದಳ ಎಂದು ತೋರಿಸಿರುತ್ತಾನೆ. ಸದರಿ ಸ್ಥಳದಲ್ಲಿ ಕೂಡ ಪೋಟೋವನ್ನು ತೆಗೆದು, ಬರವಣಿಗೆ ಮಾಡಿ, ನನ್ನ ಸಹಿ ಪಡೆದುಕೊಂಡಿರುತ್ತಾರೆ. ಸಾಕ್ಷಿಯೂ ತನ್ನ ಸಹಿ ಇರುವ ದಾಖಲೆಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಸ್ದಳ ಮಹಜರ್ ಆಗಿದ್ದು, ಅದನ್ನು ಈಗಾಗಲೇ ನಿಪಿ.27 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.27(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯೂ ನಿಪಿ.28 ರಲ್ಲಿಯ ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯೂ ಪೋಟೋದಲ್ಲಿ ಲಾಂಗ್ ಮತ್ತು ಬಟ್ಟೆಯನ್ನು ತೆಗೆದು ಹಾಜರುಪಡಿಸಿರುವುದು ಕಂಡು ಬರುತ್ತಿದ್ದೆ ಎಂದು ನುಡಿಯುತ್ತಾರೆ. ಸಾಕ್ಷಿಯೂ ನಿಪಿ.29 ರಲ್ಲಿಯ ಪೋಟೋವನ್ನು ನೋಡಿ ಗುರುತಿಸಿ,

ಕಾವೇರಿನಗರದ ನಾರಾಯಣರವರ ಕಚೇರಿಯ ಬಳಿ ತೆಗೆದ ಪೋಟೋ ಎಂದು ಗುರುತಿಸಿರುತ್ತಾರೆ. ಸದರಿ ಸ್ಥಳದಲ್ಲಿ ಮಹಜರ್ ನಲ್ಲಿ ಬರೆದಿರುವ ಮಾಹಿತಿಯನ್ನು ನನಗೆ ಓದಿ ಹೇಳಿದ್ದು, ಮಾಹಿತಿಯು ಸರಿಯಾಗಿ ಇರುತ್ತದೆ ಎಂದು ನುಡಿಯುತ್ತಾರೆ. ಲಾಂಗ್ ಮತ್ತು ಬಟ್ಟೆಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ಎಂಒ-1 ಲಾಂಗ್ ಮತ್ತು ಎಂಒ-10 ತಿಳಿ ಹಳದಿ ಬಣ್ಣದ ಬಟ್ಟೆಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಎಂಒ-1 ಮತ್ತು 10 ರ ಮೇಲಿನ ಅಂಟಿಸಿರುವ ಚೀಟಿಯ ಮೇಲೆ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

**(ಆರೋಪಿ ಪರ ವಕೀಲರು ಪಾಟೀ ಸವಾಲಿಗಾಗಿ ಸಮಾಯಾವಕಾಶ ಕೋರಿದ್ದು, ಸಮಯ ನೀಡಿ, ಪಾಟೀ ಸವಾಲನ್ನು ಮುಂದೂಡಲಾಯಿತು. )**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು
ಮೈಸೂರು.